**(ಇಂದು ದಿಃ 02.02.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಪ್ರತಿವಾದಿ 19 ರಿಂದ 22 ರ ಪರ ಶ್ರೀ. ಆರ್ ಆರ್ ಎಸ್ ವಕೀಲರಿಂದ,**

ಈ ದಾವೆಯ ಪ್ರತಿವಾದಿ 19 ರಿಂದ 22 ರವರು ನಮ್ಮ ಕುಟುಂಬಸ್ಥರವರೇ ಆಗಿರುತ್ತಾರೆ. ಈ ದಾವೆಯನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ನಿವೃತ್ತ ಪ್ರಾಂಶುಪಾಲನಾಗಿರುತ್ತೇನೆ. ನಾನು ಸುಮಾರು 40 ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ



ವಾಸಮಾಡಿಕೊಂಡಿರುತ್ತೇನೆ. ನಾನು ಊರಿಗೆ ಬಂದು ಹೋಗಿ ಮಾಡುತ್ತಿದ್ದೆನು. ನನ್ನ ಮೂಲ ಊರು ಮುರ್ಡೇಶ್ವರ. ನಾನು ವರ್ಷಕ್ಕೆ ಒಂದೆರಡು ಬಾಡಿ ಬಂದು ಹೋಗಿ ಮಾಡುತ್ತೇನೆ.

ನಾನು ಆಸ್ತಿಗಳ ಬಗ್ಗೆ ನನ್ನ ದೊಡ್ಡಪ್ಪ ಚಿಕ್ಕಪ್ಪರವರಲ್ಲಿ ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದೇನೆ. ವಾರ್ಷಿಕವಾಗಿ ನಾನು ಬಂದು ಹೋಗಿ ಮಾಡುತ್ತಿದ್ದಾಗ ನಮ್ಮ ಕುಟುಂಬದಲ್ಲಿ ಆಸ್ತಿಯ ಬಗ್ಗೆ ಚರ್ಚೆ ನಡೆಯುತ್ತಿರಲಿಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಪಾಲು ಇರುತ್ತದೆ. ನನ್ನ ಪಾಲಿನ ಆಸ್ತಿಯನ್ನು ನನ್ನ ದೊಡ್ಡಪ್ಪನ ಕಡೆಯವರು ನೋಡಿಕೊಳ್ಳುತ್ತಿದ್ದರು. ನನ್ನ ದೊಡ್ಡಪ್ಪನ ಕಡೆಯವರು ನನ್ನ ಪಾಲಿನ ಆಸ್ತಿಯ ಮೇಲೆ ಏನಾದರೂ ವ್ಯವಹಾರ ನಡೆಸಬೇಕಿದ್ದಲ್ಲಿ ನನ್ನ ಸಮ್ಮತಿಯನ್ನು ಪಡೆದುಕೊಳ್ಳುತ್ತಿದ್ದರು.

ನನಗೆ ಓ ಎಸ್ 123/2011 ದಾಖಲಾದ ಬಗ್ಗೆ ಮಾಹಿತಿ ಇತ್ತು. ಸದ್ರಿ ದಾವೆಯ ತೀರ್ಪು ದಿನಾಂಕ 23.02.2013 ರಂದು ಆದ ಬಗ್ಗೆಯೂ ಕೂಡಾ ನನಗೆ ತಿಳಿದಿತ್ತು. ನಾನು ಸದ್ರಿ ಆದೇಶದ ಪ್ರತಿಯನ್ನು ನೋಡಿರುತ್ತೇನೆ ಮತ್ತು ಅದನ್ನು ತೆಗೆದುಕೊಂಡಿರುತ್ತೇನೆ. ಸದ್ರಿ ದಾವೆಯ ತೀರ್ಪಿನಲ್ಲಿ ನನ್ನ ತಂದೆಯವರಿಗೆ ಹಕ್ಕು ಬಂದಿರುತ್ತದೆ. ನನ್ನ ತಂದೆಯವರಿಗೆ ಬಂದಂತಹ ಹಕ್ಕಿನಲ್ಲಿ ಪಾಲು ಕೊಡಬೇಕು ಅಂತಾ ಈ ದಾವೆಯಲ್ಲಿ ನಾನು ಕೇಳಿರುತ್ತೇನೆ. ಓ ಎಸ್ 123/2011 ಹೊರತುಪಡಿಸಿ ಬೇರೆ ಯಾವುದೇ ದಾವೆ ಮತ್ತು ಪ್ರಕರಣಗಳ ಬಗ್ಗೆ ನನಗೆ

ಮಾಹಿತಿ ಇರುವುದಿಲ್ಲ. ನನಗೆ ಸದ್ರಿ ತೀರ್ಪನ್ನು ಪ್ರಶ್ನಿಸಿ ಅಪೀಲು ಸಂಖ್ಯೆ 25/2017 ದಾಖಲಾದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದ್ರಿ ಅಪೀಲು ಪುರಸ್ಕೃತಗೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದ್ರಿ ಅಪೀಲಿನ ನನಗೆ ಮಾಹಿತಿ ಇರುವುದಿಲ್ಲ ಅಂತಾ ನಾನು ಈ ದಾವೆಯಲ್ಲಿ ಹೇಳಿರುತ್ತೇನೆ. ನಿಮಗೆ ಸದ್ರಿ ಅಪೀಲಿನ ಬಗ್ಗೆ ಮಾಹಿತಿ ಇದ್ದರೂ ಕೂಡಾ ಮಾಹಿತಿ ಇರುವುದಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಾನು ಈ ದಾವೆಯಲ್ಲಿ ಸದ್ರಿ ಅಪೀಲಿನ ನನಗೆ ಮಾಹಿತಿ ಇರುವುದಿಲ್ಲ ಎಂದು ಬರೆದಿರುತ್ತೇನೆ. ನನಗೆ ಆರ್ ಎಸ್ ಎ 100498/2017 ರ ಬಗ್ಗೆ ಮಾಹಿತಿ ಇರುವುದಿಲ್ಲ. ಸದ್ರಿ 2 ನೇ ಅಪೀಲಿನಲ್ಲಿ ಏನು ಆದೇಶವಾಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಈ ವಿಚಾರವನ್ನು ನಾನು ನನ್ನ ಈ ದಾವೆಯಲ್ಲಿ ಹೇಳಿರುತ್ತೇನೆ. ನನಗೆ ದಾವಾ ಆಸ್ತಿಗಳಿಗೆ



ಸಂಬಂಧಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಆದ ತೀರ್ಪಿನ ಬಗೆ ಮಾಹಿತಿ ಇರುವುದಿಲ್ಲ. ಸದ್ರಿ ಅಪೀಲಿನಲ್ಲಿ ಏನು ತೀರ್ಮಾನವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ಈ ದಾವೆಯಲ್ಲಿ ಬರೆದಿರುತ್ತೇನೆ. ನಾನು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾದ ಅಪೀಲಿನ ತೀರ್ಪಿನ ಆದೇಶ ಪ್ರತಿಯನ್ನು ನಾನು ನೋಡಿರುವುದಿಲ್ಲ. ಅದನ್ನು ನಾನು ಇವತ್ತಿನವರೆಗೂ ನೋಡಿರುವುದಿಲ್ಲ. ನಾನು ಸದ್ರಿ ಆದೇಶದ ವಿರುದ್ಧ ಈ ದಾವೆಯನ್ನು ದಾಖಲಿಸಿರುವುದಿಲ್ಲ.

ನಿಮಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಈ ದಾವೆಯನ್ನು ದಾಖಲಿಸಲು ಹೇತು ಇರುವುದಿಲ್ಲ ಎಂದರೆ ಸರಿಯಲ್ಲ.

ನನಗೆ 2017 ನೇ ಸಾಲಿನವರೆಗೆ ದಾಖಲಾತಿಗಳನ್ನು ತೆಗೆದು ನೋಡಿದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನೀವು ಈ ದಾವೆಯಲ್ಲಿ ದಾಖಲಿಸಿದ ದಾಖಲಾತಿಗಳೆಲ್ಲವೂ ನಿಮ್ಮ ದಾವೆಗೆ ಪೂರಕವಾದ ದಾಖಲಾತಿಗಳಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ತೋರಿಸಿದ ವಂಶವೃಕ್ಷವು ಸರಿ ಇರುತ್ತದೆ. ವಂಶವೃಕ್ಷದಲ್ಲಿ ಯಾರು ಯಾರು ಯಾವ ಕವಲಿನವರು ಎಂದು ನಮೂದಿಸಿದ ಬಗ್ಗೆ ಸರಿ ಇರುತ್ತದೆ. ಅನಂತಾ, ಸುಬ್ರಾಯ ಗಣಪತಿ ಭಟ್ಟ ಮತ್ತು ಸೀತಾಬಾಯಿ ಎನ್ನುವವರು ಗಣಪತಿಯವರ ಮಕ್ಕಳಾಗಿರುತ್ತಾರೆ. ಸೀತಾಬಾಯಿಯವರ ಮಕ್ಕಳು ಪ್ರತಿವಾದಿ 18 ರಿಂದ 22 ಆಗಿರುತ್ತಾರೆ ಎಂದರೆ ಸರಿ.

ಪ್ರತಿವಾದಿ 18 ರಿಂದ 22 ರವರು ಸೀತಾಬಾಯಿಯವರ ಕವಲಿಗೆ ಬರುವಂತ ಹಕ್ಕಿಗೆ ಅಧಿಕಾರವಿರುವವರಾಗಿರುತ್ತಾರೆ. ಈ ಹಿಂದೆ ಸರ್ವೋಚ್ಚ ನ್ಯಾಯಾಲಯದಲ್ಲಿ ಆದ ತೀರ್ಪಿನ ಆದೇಶದ ಮೇರೆಗೆ ಅವರಿಗೆ ಹಕ್ಕು ಪ್ರಾಪ್ತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರ್ ಎಸ್ ಎ 100498/2017 ರ ಆದೇಶವನ್ನು ಸರ್ವೋಚ್ಚ ನ್ಯಾಯಾಲವು ಎತ್ತಿ ಹಿಡಿದ ಬಗ್ಗೆ ನನಗೆ ಗೊತ್ತಿಲ್ಲ.

ನಿಮಗೆ ನೀವು ಈ ದಾವೆಯಲ್ಲಿ ಏನು ಬರೆಸಿರುತ್ತೀರಿ ಎನ್ನುವುದೇ ನಿಮಗೆ ಸ್ಪಷ್ಟವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನೀವು ಈಗಾಗಲೇ ದಾವಾ ಆಸ್ತಿಗೆ ಸಂಬಂಧಿಸಿ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಆದಂತಹ ತೀರ್ಪಿಗೆ ಬದ್ಧರಾಗಿರುತ್ತೀರಿ ಎಂದರೆ ಸರಿಯಲ್ಲ. ನೀವು ಈ ದಾವೆಯಲ್ಲಿ ಉಚ್ಚ ನ್ಯಾಯಾಲಯದ ಆದೇಶವು



ಬಂಧನಕಾರಿಯಾಗುವುದಿಲ್ಲ ಅಂತಾ ಕೇಳಿರುವ ಪ್ರಾರ್ಥನಗೆ ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿ ಸರ್ವೋಚ್ಚ ನ್ಯಾಯಾಲಯದಿಂದ ಆದೇಶವಾದ ಕಾರಣ ಈ ದಾವೆ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ.**